ಪಿ ಡಬ್ಲು 2

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರೀಸಲಾಯಿತು.

ದಿನಾಂಕಃ 24-06-2022.

**ಮುಂದುವರಿದ ಪಾಟೀಸವಾಲುಃ 1,2,13 ಹಾಗೂ 15 ನೇ ಪ್ರತಿವಾದಿಗಳ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

1. ನನಗೆ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳ ಮಾಹಿತಿ ಇದೆ. ಅವುಗಳನ್ನು ನೋಡಿ ತಿಳಿದುಕೊಂಡಿದ್ದೇನೆ. ಈ ದಾವೆ ದಾಖಲಿಸುವ ವೇಳಯಲ್ಲಿ ದಾವಾ ಆಸ್ತಿಗಳಲ್ಲಿ ಪ್ರತ್ಯೇಕ ಹಿಸ್ಸೆ ಆಗಿತ್ತು ಎಂದರೆ ನಿಜ. ಸರ್ವೆ ನಂ.680 ರಲ್ಲಿ ಹಿಸ್ಸೆಗಳು ಆದ ಬಗ್ಗೆ ನಾನು ವಕೀಲರಿಗೆ ದಾವೆ ದಾಖಲಿಸುವಾಗ ಮಾಹಿತಿ ಕೊಟ್ಟಿದ್ದೆ ಎಂದರೆ ನಿಜ. ದಾವೆ ದಾಖಲಿಸುವ ವೇಳೆಯಲ್ಲಿ ಸರ್ವೆ ನಂ.680 ಹಿಸ್ಸಾ-2 ಕ್ಕೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ನಿಜ.

2. ನನ್ನ ತಂದೆ ಮೃತಪಟ್ಟ ನಂತರ ಆಸ್ತಿ ಹಿಸ್ಸೆ ಮಾಡಿಕೊಳ್ಳಬೇಕು ಎನ್ನುವ ಕಾರಣದಿಂದ ನಾನು ಆಸ್ತಿಗಳ ಪಹಣಿ ಪತ್ರಿಕೆಗಳನ್ನು ನೊಡಿದ್ದೆ. ನನ್ನ ತಂದೆ ದಿ.16-12-2014 ರಂದು ಮೃತಪಟ್ಟಿದ್ದಾರೆ. ನನ್ನ ತಂದೆ ಮೃತಪಟ್ಟ ನಂತರ ನಾವು ಪಹಣಿ ಪತ್ರಿಕೆಗಳಲ್ಲಿ ವಾರಸು ಎಂಟ್ರಿ ಮಾಡಿಕೊಂಡಿಲ್ಲ. ಈ ದಾವೆ ದಾಖಲಿಸುವ ವೇಳೆಯಲ್ಲಿ ಸರ್ವೆ ನಂ.680/2 ರ ಮಾರುಕಟ್ಟೆ ಮೌಲ್ಯ ಅಂದಾಜು ಗುಂಟೆಗೆ ರೂ.3,00,000/- ಇತ್ತು.

3. ನಮ್ಮ ತಂದೆ ಮಾಡಿಕೊಟ್ಟ ದಾನ ಪತ್ರದ ಆಧಾರದ ಮೇಲೆ ಸರ್ವೆ ನಂ.680/2 ರ ಪಹಣಿ ಪತ್ರಿಕೆ 2 ನೇ ಪ್ರತಿವಾದಿ ಹೆಸರಿಗೆ ಬದಲಾಗಿದೆ ಎಂದರೆ ನಿಜ. 2 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಪತ್ರಿಕೆ ದಾಖಲಿಸಿದ ಬಗ್ಗೆ ಕಂದಾಯ ಇಲಾಖೆಯಲ್ಲಿ ಯಾವುದೇ ಅರ್ಜಿ ಅಥವಾ ಮೇಲ್ಮನವಿ ಸಲ್ಲಿಸಿಲ್ಲ ಮತ್ತು ಎಂಟ್ರಿಯನ್ನು ಪ್ರಶ್ನಿಸಿಲ್ಲ ಎಂದರೆ ನಿಜ.

4. ದಾನ ಪತ್ರದ ಮೂಲಕ 2 ನೇ ಪ್ರತಿವಾದಿಗೆ ಕೊಟ್ಟ ಆಸ್ತಿಯ ಪಹಣಿ ಪತ್ರಿಕೆ ನಾನು ನೋಡಿದ್ದೇನೆ. ಆ ಪಹಣಿ ಪತ್ರಿಕೆ ಪ್ರಕಾರ ದಾನ ಪತ್ರದ ಆಸ್ತಿಗೆ 2 ನೇ ಪ್ರತಿವಾದಿ ಕಬ್ಜಾದಾರನಾಗಿದ್ದಾನೆ ಎಂದರೆ ಸರಿಯಲ್ಲ. ದಾನ ಪತ್ರದ ಆಸ್ತಿ ಈಗ 2 ನೇ ಪ್ರತಿವಾದಿಯ ಕಬ್ಜಾ ವಹಿವಾಟಿಯಲ್ಲಿ ಇದೆ ಎಂದರೆ ನಿಜ. ಸಾಕ್ಷಿ ಮುಂದುವರಿದು ಅದನ್ನೇ ನೋಡಿ ನಾನು ಈ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ.

5. ದಾನ ಪತ್ರದ ಆಸ್ತಿಯಲ್ಲಿ 6 ಗುಂಟೆ ಕ್ಷೇತ್ರವನ್ನು 2 ನೇ ಪ್ರತಿವಾದಿ 11 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ 6 ಗುಂಟೆ ಕ್ಷೇತ್ರದಲ್ಲಿ 5 ಗುಂಟೆ ಕ್ಷೇತ್ರವನ್ನು 11 ನೇ ಪ್ರತಿವಾದಿ ಬಿನ್‌ಶೇತ್ಕಿ ಯಾಗಿ ಪರಿವರ್ತಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ 2 ನೇ ಪ್ರತಿವಾದಿಗೆ ದಾನ ಪತ್ರ ಮಾಡಿದ ಆಸ್ತಿಯ ಬಗ್ಗೆ ಈ ದಾವೆ ನಡೆಸಲು ನನಗೆ ಅಧಿಕಾರ

ಇಲ್ಲ ಎಂದರೆ ಸರಿಯಲ್ಲ. ದಾನ ಮಾಡಿದ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾದ ಕಾರಣ ಅದರಲ್ಲಿ ಪಾಲು ಕೇಳುವ ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇನ್ನು ಉಳಿದ ಪ್ರತಿವಾದಿಯರ ಪರ ಉಳಿದ ವಕೀಲರಿಂದಃ**

ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.